29)	ಡಿ.ಟಿ. ಜಯಕುಮಾರ್ ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು	3.75
30)	ಪಿ.ಸಿ. ಸಿದ್ದನಗೌಡರ್, ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ಪರಿಸರ ರಾಜ್ಯ ಸಚಿವರು	0.20
31)	ಬಸವರಾಜ ರಾಯರೆಡ್ಡಿ, ಮಾನ್ಯ ವಸತಿ ಖಾತೆ ರಾಜ್ಯ **ಸಚಿವರು**	1.10
32)	ಬಿ.ಟಿ. ಲಲಿತಾನಾಯಕ್ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತ ರಾಜ್ಯ ಸಚಿವರು	2.60
33)	ಎ.ಬಿ, ಪಾಟೀಲ್, ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು	3.50
34)	ಆಜಯಕುಮಾರ್ ಸರ್ ನಾಯಕ್ ಮಾನ್ಯ ಯುವಜನ ಮತ್ತು ಕ್ರೀಡೆ ರಾಜ್ಯ ಸಚಿವರು	3.00
35)	ಬಿ. ಮುನಿಯಪ್ಪ ಮುದ್ದಪ್ಪ, ಮಾನ್ಯ ಭಾರಿ ನೀರಾವರಿ ರಾಜ್ಯ ಸಚಿವರು	2.60
36)	ಮಿರಾಜುದ್ದೀನ್ ಎನ್. ಪಾಟೀ್. . ಮಾನ್ಯ ಬಂದಿಖಾನೆ ಹೋಮಗಾರ್ಡ್ಸ್ ಸಿವಿಲ್ ಡಿಫೆನ್ಸ್ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು	2.50
37)	ಕೆ.ಜಯಪ್ರಕಾಶ್ ಹೆಗ್ಡೆ ಮಾನ್ಯ ಬಂದರು ಮೀನುಗಾರಿಕೆ ರಾಜ್ಯ ಸಚಿವರು	1.84
	ಒಟ್ಟು ಮೊತ್ತ ರೂ.	80.30 ಲಕ್ಷಗಳು

ಬಾದಾಮಿ ತಾಲ್ಲೂಕಿನಲ್ಲಿ ಮಸೀದಿ ರಿಪೇರಿಗೆ ಮಂಜೂರಾದ ಹಣ.

672 - ಶ್ರೀ ಬಿ.ಬಿ. ಚಿಮ್ಮನ ಕಟ್ಟಿ (ಬಾದಾಮಿ) : ಮಾನ್ಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ವಕ್ಫ್ ರಾಜ್ಯ ಸಚಿವರು. ಈ ಕೆಡಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ತಾಲ್ಲೂಕಿನಲ್ಲಿ ಜಿಲ್ಲೆಯ ವಕ್ಫ್ ಬೋರ್ಡಿನಿಂದ 1990 ರಿಂದ 1994-95ರವರೆಗೆ ಮಂಜೂರಾದ ಕಾಮಗಾರಿಗಳಾವುವು ಹಾಗು ಹಣವೆಷ್ಟು

ಅ) 1995-96ರಲ್ಲಿ ಬಾದಾಮಿ ಹಾಗೂ ಕೆರೂರು ಪಟ್ಟಣಗಳಲ್ಲಿ ಮಸೀದಿಗಳ ರಿಪೇರಿಗಾಗಿ ಹಾಗೂ ಖಬರಸ್ಥಾನಗಳ ಅಭಿವೃದ್ಧಿಗಾಗಿ ನಿಯೋಜಿಸಲಾದ ಹಣವೆಷ್ಟು?

ಆ) ಪ್ರಸ್ತುತ ಸಾಲಿನಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳಾವುವು?

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು) :

ಅ) ಕಾಮಗಾರಿಗಳ ಸಂಖ್ಯೆ ಹತ್ತು ಹಣ ರೂ. 1,75,000-00

ಆ) ಇಲ್ಲಿಯವರೆಗೆ ಹಣ ನಿಯೋಜಿಸಿರುವುದಿಲ್ಲ.

ಇ) ಯಾವುದೂ ಇಲ್ಲ.

ಪೂರಕ ಟಿಪ್ಪಣಿ

1) 1990ರಿಂದ 95ರವರೆಗೆ ಮಸೀದಿ ಹಾಗೂ ಈದ್‌ಗಾಗಳ ದುರಸ್ತಿ, ಜೀರ್ಣೋದ್ಧಾರ, ನಿರ್ಮಾಣ ಇತ್ಯಾದಿಗಳಿಗೆ ಸರ್ಕಾರವು ಬಾದಾಮಿ ತಾಲ್ಲೂಕಿನ ವಕ್ಫ ಸಂಸ್ಥೆಗಳಿಗೆ ರೂ. 1,75,000-00 ಮಂಜೂರಾಗಿದೆ.

ಅನುದಾನಗಳ ಮಂಜೂರಾತಿ ಹಾಗೂ ಬಿಡುಗಡೆ ಸಂಬಂಧಿಸಿದ ವಿವರಗಳ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ.

2) 1995-96ರ ಆಯವ್ಯಯದಲ್ಲಿ ರಾಜ್ಯದ ವಕ್ಫ ಸಂಸ್ಥೆಗಳ ದುರಸ್ತಿ, ಜೀರ್ಣೋದ್ಧಾರ ಇತ್ಯಾದಿಗಳಿಗೆ ರೂ. 2.00 ಕೋಟಿ ಮಂಜೂರು ಮಾಡಲಾಗಿದೆ. ತಾಲ್ಲೂಕು ಹಾಗೂ ಜಿಲ್ಲೆಗಳಿಗೆ ಅನುದಾನಗಳ ಹಂಚಿಕೆಗೆ ಯಾವುದೇ ಅವಕಾಶ ಇರುವುದಿಲ್ಲ. ಸಕ್ಷಮ ಪ್ರಾಧಿಕಾರದಿಂದ ಅನುಮೋದಿತ ಅಂದಾಜು ಹಾಗೂ ನಕ್ಷೆಗಳೊಂದಿಗೆ ಸ್ವೀಕರಿಸಿದ ಬೇಡಿಕೆಗಳ ಮೇರೆಗೆ ವಕ್ಫ ಸಂಸ್ಥೆಗಳಿಗೆ ಅನುದಾನ ಹಂಚಿಕೆ ಮಾಡಲಾಗುತ್ತದೆ.

ಏಕರೂಪ ವಾಣಿಜ್ಯ ತೆರಿಗೆ ಕಾಯಿದೆ ಜಾರಿ ಮತ್ತು ತೆರಿಗೆ ಸಂಗ್ರಹಣೆ.

673 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಏಕರೂಪ ವಾಣಿಜ್ಯ ತೆರಿಗೆ ಕಾಯಿದೆಯನ್ನು ರಾಜ್ಯದಲ್ಲಿ ಯಾವ ವರ್ಷದಿಂದದ ಜಾರಿಗೆ ತರಲಾಗಿದೆ, ಅಂದಿನಿಂದ ಇಂದಿನವರೆಗೂ ವಾರ್ಷಿಕ ತೆರಿಗೆ ಸಂಗ್ರಹಣ ಗುರಿ ಎಷ್ಟು. ಮುಟ್ಟಿದೆ ಭೌತಿಕ ಗುರಿ ಎಷ್ಟು?

ಆ) ವಾಣಿಜ್ಯ ತೆರಿಗೆ ಇಲಾಖೆಯ ವಿವಿಧ ಶ್ರೇಣಿಯ ಅಧಿಕಾರಿಗಳ ಕಛೇರಿಗಳ ಹಾಗೂ ಬಾಡಿಗೆ ಕಟ್ಟಡಗಳಿಗಾಗಿ ಪ್ರತಿ ವರ್ಷ ಬಾಡಿಗೆ ರೂಪದಲ್ಲಿ ಸಂದಾಯ ಮಾಡುತ್ತಿರುವ ಹಣವೆಷ್ಟು?

ಇ) ರಾಜ್ಯದ ವ್ಯಾಪಾರ ವಹಿವಾಟು ಪಕ್ಕದ ಯಾವ ಯಾವ ರಾಜ್ಯದ ಜೊತೆಗೆ ಶೇಕಡ ಯಾವ ಯಾವ ಪ್ರಮಾಣದಲ್ಲಿದೆ (ವಿವರಗಳನ್ನು ಒದಗಿಸುವುದು)?

ಶ್ರೀ ಸಿದ್ದರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) :